# ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ ನಡವಳಿಗಳು

ವಿಷಯ: ಕಾಲೇಜು ಶಿಕ್ಷಣ ಇಲಾಖೆ ದಿನಗೂಲಿ ನೌಕರರ ವೇತನ ಇನ್ನಿತರೆ ಸೌಲಭ್ಯಕ್ಕಾಗಿ ಅನುದಾನ ಬಿಡುಗಡೆ ಕುರಿತು.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ/77/ಶಾಸನ/2012, ದಿ:15.02.2013.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/33/ಯುಇಸಿ/2014, ದಿ:14.11.2014
3. ಸರ್ಕಾರದ ಆದೇಶ ಸಂಖ್ಯೆ:ಇಡಿ/60/ಹೆಚ್‌ಪಿಸಿ/2018, ದಿನಾಂಕ:09/04/2018,27/07/2018,05/11/2018 ಮತ್ತು 16/01/2019.
4. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ/22/ಸೇಸ್ಥಅ/2018,ದಿನಾಂಕ:15.11.2018
5. ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳ ಪ್ರಸ್ತಾವನೆ.

--*--

**ಪ್ರಸ್ತಾವನೆ:**

ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ದಿನಾಂಕ:10.04.2006ರಂದು 10 ವರ್ಷಗಳಗಿಂತ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರುವ ದಿನಗೂಲಿ ನೌಕರರನ್ನು ಅವರು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರಿಸಿ ಉಲ್ಲೇಖ(1) ಮತ್ತು (2)ರ ಸರ್ಕಾರದ ಅಧಿಸೂಚನೆಗಳಲ್ಲಿ ಆದೇಶಿಸಲಾಗಿದೆ. 2018-19ನೇ ಸಾಲಿನಲ್ಲಿ ಉಲ್ಲೇಖ-3ರ ಸರ್ಕಾರದ ಆದೇಶದಲ್ಲಿ ಆಯವ್ಯಯ ಲೆಕ್ಕಶೀರ್ಷಿಕೆ:2202-03-103-2-01-034ರಡಿಯಲ್ಲಿ ಒದಗಿಸಿರುವ ರೂ.950.00 ಲಕ್ಷಗಳ ಅನುದಾನದಲ್ಲಿ ನಾಲ್ಕು ತ್ರೈಮಾಸಿಕ ಕಂತುಗಳಲ್ಲಿ ರೂ.950.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ ದಿನಗೂಲಿ ಮತ್ತು ಹೊರ ಗುತ್ತಿಗೆ ಸಿಬ್ಬಂದಿಗಳ ವೇತನವನ್ನು ಪಾವತಿಸಲು ಅನುಮತಿ ನೀಡಲಾಗಿರುತ್ತದೆ. ಉಲ್ಲೇಖ(4)ರ ಸರ್ಕಾರದ ಆದೇಶದಲ್ಲಿ ಅರ್ಹ ದಿನಗೂಲಿ ನೌಕರರಿಗೆ 2018ರ ರಾಜ್ಯ ಪರಿಷ್ಕೃತ ವೇತನ ಶ್ರೇಣಿಗಳನ್ವಯ ಆರ್ಥಿಕ ಸೌಲಭ್ಯಗಳನ್ನು ದಿನಾಂಕ:01.08.2018 ರಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ. ಅದರಂತೆ ದಿನಾಂಕ:15/11/2018ರ ಇಲಾಖೆಯ ಆದೇಶದಲ್ಲಿ ಆಗಸ್ಟ್-2018 ರಿಂದ ಡಿಸೆಂಬರ್-2018ರ ಮಾಹೆಯವರೆಗೆ ಪರಿಷ್ಕೃತ ಶ್ರೇಣಿಗಳನ್ವಯ ಆರ್ಥಿಕ ಸೌಲಭ್ಯಗಳ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ವಿವಿಧ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ಆಧರಿಸಿ ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರುಗಳಿಗೆ ಲೆಕ್ಕಶೀರ್ಷಿಕೆ: 2202-03-103-2-01-034 ರಡಿಯಲ್ಲಿ ಜನವರಿ-2019 ಮತ್ತು ಫೆಬ್ರವರಿ-2019 ಮಾಹೆಯವರೆಗೆ ವೇತನ ಮತ್ತು ಅನ್ವಯವಾಗುವ ಭತ್ಯೆಗಳನ್ನು ಪಾವತಿಸುವ ಸಂಬಂಧ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ:09:ದಿನಗೂಲಿನೌ.ವೇ:ಆಯವ್ಯಯ:2018-19, ಬೆಂಗಳೂರು, ದಿನಾಂಕ:21.01.2019**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸೇವೆಯನ್ನು 60 ವರ್ಷಗಳ ವಯಸ್ಸು ಪೂರ್ಣವಾಗುವವರೆಗೂ ದಿನಗೂಲಿ ಆಧಾರದ ಮೇಲೆ ಮುಂದುವರಿಸಿ ಉಲ್ಲೇಖ(1) ಮತ್ತು (2)ರ ಸರ್ಕಾರದ ಅಧಿಸೂಚನೆಗಳಲ್ಲಿ ಆದೇಶಿಸಿರುವ ಹಿನ್ನಲೆಯಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿನ ಅರ್ಹ ದಿನಗೂಲಿ ನೌಕರರುಗಳಿಗೆ 2018-19ನೇ ಸಾಲಿಗೆ ಜನವರಿ-2019 ಮತ್ತು ಫೆಬ್ರವರಿ-2019 ವರೆಗೆ ವೇತನ ಮತ್ತು ಅನ್ವಯವಾಗುವ ಭತ್ಯೆಗಳನ್ನು ಆಯವ್ಯಯ ಲೆಕ್ಕಶೀರ್ಷಿಕೆ:2202-03-103-2-01-034ರಡಿಯಲ್ಲಿ **ಒಟ್ಟು 8,09,598/-(ರೂ. ಎಂಟು ಲಕ್ಷ ಒಂಬತ್ತು ಸಾವಿರದ ಐದುನೂರ ತೊಂಬತ್ತೆಂಟು ರೂಪಾಯಿಗಳು ಮಾತ್ರ/-) ಗಳನ್ನು** ಪಾವತಿಸುವ ಸಂಬಂಧ ಕಾಲೇಜಿನ ಪ್ರಾಂಶುಪಾಲರುಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು**

**ಷರತ್ತುಗಳು :**

1. ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಮೂಲ ವೇತನದೊಂದಿಗೆ, ಶೇ.75% ರಷ್ಟು ತುಟ್ಟಿಭತ್ಯೆ ಹಾಗೂ ಮನೆಬಾಡಿಗೆ ಭತ್ಯೆ ಮಾತ್ರ ಪಾವತಿಸುವುದು.
2. ಬಿಡುಗಡೆಗೊಳಿಸಿರುವ ಅನುದಾನವನ್ನು ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸಿರುವ ಉದ್ದೇಶಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ನಿಯಮಗಳನ್ನು ಪಾಲಿಸಿ ಪಾವತಿಸುವುದು.
3. ಸದರಿ ಅನುದಾನವನ್ನು ಕೆ-2 ತಂತ್ರಾಂಶದಲ್ಲಿ ಕ್ಲೇಮ್ ಮಾಡತಕ್ಕದ್ದು.
4. ಅನುದಾನ ಬಳಕೆಯಾದ ನಂತರ ಕಡ್ಡಾಯವಾಗಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

**ಇವರಿಗೆ:**

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ಅಂತರ್ಜಾಲದಲ್ಲಿ ಅಳವಡಿಸಲು ಕೋರಿದೆ.
3. ಕಛೇರಿ ಪ್ರತಿ.

ಆದೇಶ ಸಂಖ್ಯೆ:ಕಾಶಿಇ:09:ದಿನಗೂಲಿ ನೌ.ವೇ:ಆಯವ್ಯಯ:2018-19, ಬೆಂಗಳೂರು ದಿನಾಂಕ:೨೪.01.2019 ರ ಆದೇಶಕ್ಕೆ ಅನುಬಂಧ

| ಕ್ರ ಸಂ | ಸಿಬ್ಬಂದಿಯ ಹೆಸರು | ಕಾಲೇಜಿನ ಹೆಸರು | ಅವಧಿ | | ಬಿಡುಗಡೆ ಮಾಡಲಾಗಿರುವ ಅನುದಾನ |
|---|---|---|---|---|---|
| | | | ಇಂದ | ವರೆಗೆ | |
| 1 | ಮೂರ್ತಿ.ವಿ.ಎಲ್. | ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು | ಜನವರಿ-2019 | ಫೆಬ್ರವರಿ-2019 | 41078 |
| 2 | ನಾಗರಾಜ.ಎಂ. | ಸರ್ಕಾರಿ ಆರ್.ಸಿ. ಕಾಲೇಜು, ಬೆಂಗಳೂರು | ಜನವರಿ-2019 | ಫೆಬ್ರವರಿ-2019 | 41078 |
| | | | ಜನವರಿ-2019 | ಫೆಬ್ರವರಿ-2019 | 41078 |
| 3 | ಶಿವರಾಮಯ್ಯ. | ಸರ್ಕಾರಿ ಕಲಾ ಕಾಲೇಜು, ಬೆಂಗಳೂರು | ಜನವರಿ-2019 | ಫೆಬ್ರವರಿ-2019 | 41078 |
| 4 | ಸಿದ್ಧರಾಮಯ್ಯ.ಟಿ. | | ಜನವರಿ-2019 | ಫೆಬ್ರವರಿ-2019 | 41078 |
| 5 | ನಾಗರಾಜ.ಡಿ. | | ಜನವರಿ-2019 | ಫೆಬ್ರವರಿ-2019 | 41078 |
| 6 | ಬೆಟ್ಟಯ್ಯ.ಹೆಚ್. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿರಾ | ಜನವರಿ-2019 | ಫೆಬ್ರವರಿ-2019 | 36998 |
| 7 | ರಂಗನಾಥಪ್ಪ. | | ಜನವರಿ-2019 | ಫೆಬ್ರವರಿ-2019 | 36998 |
| 8 | ಗಂಗಮ್ಮ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ | ಜನವರಿ-2019 | ಫೆಬ್ರವರಿ-2019 | 36998 |
| 9 | ಜಯನರಸಿಂಹ ಮೂರ್ತಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ | ಜನವರಿ-2019 | ಫೆಬ್ರವರಿ-2019 | 36998 |
| 10 | ಓಬಳೇಶಪ್ಪ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾವಗಡ | ಜನವರಿ-2019 | ಫೆಬ್ರವರಿ-2019 | 36998 |
| 11 | ಶಿವಲಿಂಗಯ್ಯ.ಎಂ | ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು | ಜನವರಿ-2019 | ಫೆಬ್ರವರಿ-2019 | 39038 |
| 12 | ಬಸಮ್ಮ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ವಿದ್ಯಾರ್ಥಿನಿಲಯ, ಮೈಸೂರು | ಜನವರಿ-2019 | ಫೆಬ್ರವರಿ-2019 | 39038 |
| 13 | ನಾಗರಾಜೇಗೌಡ | ಸರ್ಕಾರಿ ಕಲಾ ಕಾಲೇಜು ಹಾಸನ | ಜನವರಿ-2019 | ಫೆಬ್ರವರಿ-2019 | 36998 |
| 14 | ಗಾಯಿತ್ರಿ ಎಂ.ಎಸ್ | ಸರ್ಕಾರಿ ಮಹಿಳಾ ಕಾಲೇಜು ಮಂಡ್ಯ | ಜನವರಿ-2019 | ಫೆಬ್ರವರಿ-2019 | 36998 |
| 15 | ಶಿವಾನಂದ.ಸಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ | ಜನವರಿ-2019 | ಫೆಬ್ರವರಿ-2019 | 36998 |
| 16 | ನಂಜೇಗೌಡ | ಐ.ಡಿ.ಎಸ್.ಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚಿಕ್ಕಮಂಗಳೂರು | ಜನವರಿ-2019 | ಫೆಬ್ರವರಿ-2019 | 36998 |
| 17 | ಮೂಕೇಶಪ್ಪ.ಎ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರೇಕೆರೂರು | ಜನವರಿ-2019 | ಫೆಬ್ರವರಿ-2019 | 36998 |
| 18 | ರಂಗಣ್ಣ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾನ್ವಿ | ಜನವರಿ-2019 | ಫೆಬ್ರವರಿ-2019 | 36998 |
| 19 | ಶಂಕರ ಅಡಿವೆಪ್ಪ | ಸರ್ಕಾರಿ ಕಾಲೇಜು ಕಲಬುರಗಿ | ಜನವರಿ-2019 | ಫೆಬ್ರವರಿ-2019 | 39038 |
| 20 | ಹಿರಗೆಪ್ಪ ರುಕ್ಕಪ್ಪಾ | | ಜನವರಿ-2019 | ಫೆಬ್ರವರಿ-2019 | 39038 |
| ಒಟ್ಟು ಮೊತ್ತ | | | | | 809598 |

(ಎಂಟು ಲಕ್ಷದ ಒಂಬತ್ತು ಸಾವಿರದ ಐದು ನೂರ ತೊಂಬತ್ತೆಂಟು ರೂಪಾಯಿಗಳು ಮಾತ್ರ)

ಕಾಲೇಜು ಶಿಕ್ಷಣ ನಿರ್ದೇಶಕರು